**ಎಂ.ವಿ.ಸಿ.ನಂ. 186 / 2024**
**ಪಿ. ಡಬ್ಲ್ಯೂ. 2.**

**ದಿನಾಂಕಃ 17-04-2026.**

ಸಾಕ್ಷಿಗೆ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರ ಪರ ವಕೀಲರಾದ: ಶ್ರೀ.ಎನ್.ಜಿ.ಆರ್.ರವರಿಂದ ಃ

ಈ ಅರ್ಜಿಯಲ್ಲಿ ನಾನು ಅರ್ಜಿದಾರ ಪರ ಸಾಕ್ಷಿದಾರನಾಗಿದ್ದು, ಇಂದು ನನ್ನ ಮೌಖಿಕ ಸಾಕ್ಷ್ಯದ ಬದಲು ಈ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಅದರಲ್ಲಿ ಬರೆದ ಎಲ್ಲಾ ವಿಷಯಗಳು ಸರಿ ಮತ್ತು ನಿಜ ಇರುತ್ತದೆ. ಅವುಗಳನ್ನು ತಿಳಿದುಕೊಂಡು ನಾನು ಸಹಿ ಮಾಡಿರುತೇನೆ.

ಈ ಕೆಳಗಿನ ದಾಖಲೆಗಳನು ಹಾಜರುಪಡಿಸಿರುತ್ತೇನೆ.

1. ಅರ್ಜಿದಾರನ ಅಂಗನ್ಯೂನತೆ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 8 ಎಂದು ಗುರುತಿಸಲಾಯಿತು, ಅದರ ಮೇಲೆ ಇರುವ ಸಹಿಯನ್ನು ನಿಪಿ 8(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರ ಪರ ವಕೀಲರಾದ ಶ್ರೀ.ಟಿ.ಜಿ.ಕೆ. ರವರಿಂದಃ**

ಅಪಘಾತ ಆದ ತಕ್ಷಣ ನಾನು ಅರ್ಜಿದಾರರನ್ನು ಪರೀಕ್ಷಿಸಿರುವುದಿಲ್ಲ ಎಂದರೆ ಸರಿ. ಅಂಗನ್ಯೂನತೆ ಪ್ರಮಾಣ ಪತ್ರವನ್ನು ನೀಡುವಾಗ ನಾನು ಅರ್ಜಿದಾರರನು ಪರೀಕ್ಷಿಸಿರುತ್ತೇನೆ ಎಂದರೆ ಸರಿ. ಅಪಘಾತ ಆದ ಒಂದು ವರ್ಷ ಒಂದು ತಿಂಗಳ ನಂತರ ನಾನು ಅರ್ಜಿದಾರರನು ಪರೀಕ್ಷಿಸಿರುತ್ತೇನೆ. ಮುಂಚೆ ಇದ್ದ ಎಲ್ಲಾ ವೈದ್ಯಕೀಯ ದಾಖಲಾತಿಗಳನ್ನು ಪರಿಶೀಲನೆ ಮಾಡಿ ನಾನು ಅಂಗನ್ಯೂನತೆ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ. ಅಂಗನ್ಯೂನತೆಯ ಪ್ರಮಾಣ ಪತ್ರದಲ್ಲಿನ ಅಂಶಗಳನ್ನು ನಾನು ಹೆಚ್ಚಾಗಿ ನಮೂದಿಸಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರನ ದೇಹದ ಕೇಳಭಾಗಕ್ಕೆ 31% ಪ್ರತಿಶತ ಅಂಗನ್ಯೂನತೆ ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ. ಕ್ಷ-ಕಿರಣ ವರದಿಯ ಪ್ರಕಾರ ಅರ್ಜಿದಾರನ ಮೂಳೆಗಳು ಜೊಡಣೆಯಾಗಿರುತ್ತವೆ ಎಂದರೆ ಸರಿ. ಅರ್ಜಿದಾರನಿಗೆ ಸಂಪೂರ್ಣ ಅಂಗನ್ಯೂನತೆಯು 31% ಪ್ರತಿಶತ ಇರುತ್ತದೆ ಎಂದು ನಾನು ಹೆಚ್ಚಾಗಿ ನಿಪಿ 8 ರಲ್ಲಿ ಬರೆದಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ಸಹಾಯ ಮಾಡಲು ನಾನು ನಿಪಿ 8 ನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರನಿಗೆ 34 ವಯಸ್ಸು ಇರುವ ಕಾರಣ ಆತನ ಅಂಗನ್ಯೂನತೆಯು ಕ್ರಮೇಣ ಕಡಿಮೆ ಆಗುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ಬಲಗಾಲು ಇರುವ ರಾಡ್ ನ್ನು ತೆಗೆಯಲು ಆತನ ಚಿಕಿತ್ಸೆಗೋಸ್ಕರ

ಪ್ರತ್ಯೇಕವಾಗಿ 35 ಸಾವಿರ ಬೇಕಾಗಿರುತ್ತದೆ ಎಂದು ಬರೆದಿರುತ್ತೀರಿ ಹಾಗಾದರೆ ನೀವೇನಾದರೂ ಇದರ ಬಗ್ಗೆ ಅಂದಾಜು ಪಟ್ಟಿಯನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ಹೇಳುತ್ತಾರೆ. ಈ ಪ್ರಕರಣದಲ್ಲಿ ನನಗೆ ಸಾಕ್ಷ್ಯ ನುಡಿಯಲು ಮಾನ್ಯ ನ್ಯಾಯಾಲಯದಿಂದ ನೋಟೀಸ್ ಬಂದಿರುವುದಿಲ್ಲ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತ ಲೇಖನದ ಮುಖಾಂತರ ಬೆರಳಚ್ಚುಗಾರನಿಂದ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಯಾದಗಿರಿ.